ಒ.ಎಸ್. -103 /2017

ಡಿ.ಡಬ್ಲ್ಯು. - 01

**ದಿನಾಂಕ 06-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - ವಾದಿ ಪರ ವಿವಿಆರ್ ವಕೀಲರಿಂದಃ**

ನಿಪಿ-5 ವಿಭಾಗಪತ್ರದಲ್ಲಿ ದಾವಾ ಸ್ವತ್ತಿನ ಐಟಂ ನಂ 7 ಸರ್ವೆ ನಂ 241/2 ಎ 78 ಸೆಂಟ್ಸ್ ಜಾಗ ಸೇರಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದನ್ನು ಅಂಗಾರ ಪೂಜಾರಿ ತನ್ನ ಸ್ವಂತಕ್ಕೆ ಇಟ್ಟುಕೊಂಡು ಉಳಿದಿದನ್ನು ತಂಗಿಯರಿಗೆ ಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. 12-11-1999 ರಂದು ಅಂದರೆ ನಿಪಿ-5 ವಿಭಾಗಪತ್ರ ಆದ ದಿನಾಂಕದಂದು ಅಂಗಾರ ಪೂಜಾರಿ ಬದುಕಿದ್ದರೋ ಇಲ್ಲವೋ ನೆನಪಿಲ್ಲ. 12-11-1999 ರ ವಿಭಾಗಪತ್ರಕ್ಕೆ ಅಂಗಾರ ಪೂಜಾರಿ ಅಥವಾ ಅವರ ಮಕ್ಕಳಲಾಗಲೀ ಸೇರಿದ್ದಾರೋ ಇಲ್ಲವೋ ನನಗೆ ಈಗ ಹೇಳಲು ಆಗುವುದಿಲ್ಲ ದಾಖಲೆ ನೋಡಿ ಹೇಳಬೇಕಾಗುತ್ತದೆ. ನಿಪಿ-5 ವಿಭಾಗಪತ್ರಕ್ಕೆ ನಾನು ಸಹಿ ಮಾಡಿದ್ದೇನೋ ಇಲ್ಲವೋ ಎಂದು ನಾನು ನೋಡಿ ಹೇಳಬೇಕಾಗುತ್ತದೆ. ನಿಪಿ-5 ವಿಭಾಗಪತ್ರ ಆಗುವ ಸಮಯದಲ್ಲಿ ನಾನು ಇದ್ದೆ. ನಿಪಿ-5 ವಿಭಾಗಪತ್ರವನ್ನು ವಕೀಲರಾದ ವಿಶ್ವನಾಥ್ ಶೆಟ್ಟಿ ವಕೀಲರು ತಯಾರಿಸಿರುತ್ತಾರೆ. ಸದ್ರಿ ನಿಪಿ-5 ವಿಭಾಗಪತ್ರ ಆಗುವ ಸಮ ಯದಲ್ಲಿ ಯಾರು ಯಾರು ಇದ್ದರು ಎಂದು ನನಗೆ ನೆನಪಿಲ್ಲ ಕಾರಣ ತುಂಬಾ ವರ್ಷಗಳಾಗಿರುತ್ತದೆ. ನಿಪಿ-5 ವಿಭಾಗಪತ್ರವನ್ನು ತಯಾರಿಸಲು ವಕೀಲರಿಗೆ ಮಾಹಿತಿಯನ್ನು ಅದಕ್ಕೆ ಸಂಬಂಧಪಟ್ಟವರು ಕೊಟ್ಟಿರುತ್ತಾರೆ. 23-02-1982 ರಲ್ಲಿ ಆಗಿದೆ ಎಂದು ಹೇಳುವ ಲಿಖಿತ ಕರಾರಿನ ಬಗ್ಗೆ ನನಗೆ ಗೊತ್ತಿಲ್ಲ .

ಅಂಗಾರ ಪೂಜಾರಿ ಮತ್ತು ಶೇಶಿ ಪೂಜಾರ್ತಿ ನಡುವೆ ಆದ ಕರಾರಿನ ಬಗ್ಗೆ ನನಗೆ ನೆನಪಿಲ್ಲ. ನನ್ನ ಪ್ರಕಾರ ಅಂಗಾರ ಪೂಜಾರಿ ಮತ್ತು ಅವರ ಮಕ್ಕಳನ್ನು ಹೊರತುಪಡಿಸಿ ಯಾವ ಆದಾರದ ಮೇಲೆ ನಿಪಿ-5 ವಿಭಾಗಪತ್ರ ಮಾಡಿಕೊಂಡಿರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅಂಗಾರ ಪೂಜಾರಿ ತನ್ನ ಸ್ವಂತ ಆಸ್ತಿಯನ್ನು ಆತನೇ ಇಟ್ಟುಕೊಂಡು ಉಳಿದ ಆಸ್ತಿಗಳನ್ನು ತನ್ನ ತಂಗಿಯರಿಗೆ ಕೊಟ್ಟಿದ್ದಾರೆ ಎಂದು ತಿಳಿಸಿರುತಾರೆ. ನಿಪಿ-5 ವಿಭಾಗಪತ್ರ ಆಗುವ ಪೂರ್ವದಲ್ಲಿ ದಾವಾ ಸ್ವತ್ತುಗಳನ್ನು ಎಷ್ಟು ಭಾಗಗಳನ್ನಾಗಿ ಮಾಡಲಾಗಿತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ . ನನ್ನ ಅಣ್ಣ ಮತ್ತು ನನ್ನ ತಂಗಿಯನ್ನು ಹೊರಗೆ ಇಟ್ಟು ಅವರಿಗೆ ಮೋಸ ಮಾಡುವ ಉದ್ದೇಶದಿಂದ ನಿಪಿ-5 ವಿಭಾಗಪತ್ರವನ್ನು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ಮತ್ತು ನನ್ನ ತಂಗಿ ಮತ್ತು ಅವರ ಮಕ್ಕಳು ಒಟ್ಟಿಗೆ ಇದ್ದೇವೆ ಎಂದು ತಿಳಿಸಿರುತ್ತಾರೆ. ನಿಪಿ-5 ವಿಭಾಗಪತ್ರದ ಮೂಲಪ್ರತಿ ಯಾರ ಬಳಿ ಇದೆ ಎಂದು ಗೊತ್ತಿಲ್ಲ.

ನನ್ನ ತಾಯಿ ಬರೆದುಕೊಟ್ಟ ಸೆಟಲ್ಮೆಂಟ್ ಡೀಡ್ ಯಾವಾಗ ಆಯಿತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸೆಟಲ್ಮೆಂಟ್ ಡೀಡ್ ನಲ್ಲಿಯೇ ಇರುತ್ತದೆ ಎಂದು ತಿಳಿಸಿರುತ್ತಾರೆ. ಸೆಟಲ್ಮೆಂಟ್ ಡೀಡ್ ಅಲ್ಲದೇ ಆ ದಿನ ಬೇರೆ ದಾಖಲೆ ಆಗಿದಿಯೋ ಇಲ್ಲವೋ ನನಗೆ ನೆನಪಿಲ್ಲ. ಸೆಟಲ್ಮೆಂಟ್ ಡೀಡ್ ಕೂಡ ವಕೀಲರಾದ ವಿಶ್ವನಾಥ್ ಶೆಟ್ಟಿ ರವರ ಕಚೇರಿಯಲ್ಲಿ ಅಗಿರುತ್ತದೆ. ಸೆಟಲ್ಮೆಂಟ್ ಡೀಡ್ ನ್ನು ಇಂಗ್ಲೀಷ್ ನಲ್ಲಿ ತಯಾರಿಸಲು ಯಾರು ಮಾಹಿತಿ ಕೊಟ್ಟರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನ್ನ ತಾಯಿ ಹೇಳಿಸಿ ಮಾಡಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಸಾಕ್ಷಿ ಮುಂದುವರಿದು ನನ್ನ ತಾಯಿ ಇಂಗ್ಲೀಷ್ ಮಾಡಿ ಎಂದು ಹೇಳಿದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸೆಟಲ್ಮೆಂಟ್ ಡೀಡ್ ನ ಮೂಲಪ್ರತಿ ನಮ್ಮ ಬಳಿ ಇದೆಯೋ ಇಲ್ಲವೋ ಎಂದು ನೋಡಬೇಕು. ಸೆಟಲ್ಮೆಂಟ್ ಡೀಡ್ ನಲ್ಲಿ ಇರುವ ನನ್ನ

ತಾಯಿಯ ಹೆಬ್ಬೆಟ್ಟು ನನ್ನ ತಾಯಿಯದೇ ಎಂದು ಹೇಳಲು ಮತ್ತು ತೋರಿಸಲು ನನ್ನ ತಾಯಿಯ ಹೆಬ್ಬೆಟ್ಟು ಇರುವ ಬೇರೆ ದಾಖಲೆ ಇದೆಯೋ ಇಲ್ಲವೋ ಎಂದು ನೋಡಬೇಕು ಎಂದು ಸಾಕ್ಷಿ ತಿಳಿಸಿರುತ್ತಾರೆ. ನಿಮ್ಮ ತಾಯಿ ನನ್ನ ಮೇಲೆ ನಂಬಿಕೆ ಇಟ್ಟಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ತಾಯಿ ಮಗನ ಮೇಲೆ ನಂಬಿಕೆ ಇಟ್ಟಿರುತ್ತಾರೆ ಮತ್ತು ಎಲ್ಲಾ ಮಕ್ಕಳ ಮೇಲೂ ನಂಬಿಕೆ ಇಟ್ಟಿರುತ್ತಾರೆ ಆದರೇ ನಾನು ಜಮೀನಿನ ಕೆಲಸ ಮತ್ತು ಇತರೆ ಕೆಲಸ ಮಾಡುತಿದ್ದದರಿಂದ ಮತ್ತು ನನ್ನ ಅಣ್ಣ ಹೊರಗೆ ಇದ್ದುದರಿಂದ ನನ್ನ ಮೇಲೆ ಸ್ವಲ್ಪ ಜಾಸ್ತಿ ನಂಬಿಕೆ ಇಟ್ಟಿದ್ದರು ಎಂದು ತಿಳಿಸಿರುತ್ತಾರೆ . ಸೆಟಲ್ಮೆಂಟ್ ಡೀಡ್ ಆಗುವಾಗ ನಿಮ್ಮ ಅಣ್ಣ ಮತ್ತು ತಂಗಿಯ ಒಪ್ಪಿಗೆಯನ್ನು ಪಡೆದಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನ್ನ ತಂಗಿ ಆಗಿನಿಂದಲೂ ನನ್ನ ಜೊತೆಯೇ ಇರುತ್ತಾರೆ ಎಂದು ತಿಳಿಸಿರುತ್ತಾರೆ. ಸಾಕ್ಷಿ ಮುಂದುವರಿದು ಸ್ವತ್ತು ನನ್ನತಾಯಿಯ ಸ್ವಂತ ಆಸ್ತಿಯಾಗಿರುತ್ತದೆ ನನ್ನ ತಂಗಿಯ ಒಪ್ಪಿಗೆ ಪಡೆದೇ ಬರೆದು ಕೊಟ್ಟಿರುತ್ತಾರೆ , ಸಾಕ್ಷಿ ಪುನಃ ಮುಂದುವರಿದು ನನ್ನ ತಾಯಿಯ ಸ್ವಂತ ಆಸ್ತಿಯಾಗಿರುವುದರಿಂದ ಯಾರ ಒಪ್ಪಿಗೆ ಪಡೆಯುವ ಅವಶ್ಯಕತೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ . ಸೆಟಲ್ಮೆಂಟ್ ಡೀಡ್ ನಲ್ಲಿ ಕಾಣಿಸಿರುವ ಆಸ್ತಿ ನನ್ನ ತಾಯಿಯ ಸ್ವಂತ ಆಸ್ತಿ ಅಲ್ಲ ಎಂದರೆ ಸರಿಯಲ್ಲ . ಸದ್ರಿ ಸ್ವತ್ತು ಎಲ್ಲರಿಗೂ ಸೇರಬೇಕಾದ ಆಸ್ತಿ ಎಂದರೆ ಸರಿಯಲ್ಲ . ನನ್ನ ತಾಯಿ ಯಾವುದೇ ಸೆಟಲ್ಮೆಂಟ್ ಡೀಡ್ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ಸೆಟಲ್ಮೆಂಟ್ ಡೀಡ್ ಬರೆದುಕೊಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಅನಕ್ಷರಸ್ಥೆ ಆಗಿರುವುದನ್ನು ದುರುಪಯೋಗಪಡಿಸಿಕೊಂಡು ಇಂಗ್ಲೀಷ್ ನಲ್ಲಿ ದಾಖಲೆಯನ್ನು ತಯಾರಿಸಿ ಸೆಟಲ್ಮೆಂಟ್ ಡೀಡ್ ಮಾಡಿಸಿದ್ದೇನೆ ಎಂದರೆ ಸರಿಯಲ್ಲ . ಸೆಟಲ್ಮೆಂಟ್ ಡೀಡ್ ಗೆ ಸಾಕ್ಷಿಗಳಾಗಿ ಯಾರು ಸಹಿ ಮಾಡಿದ್ದಾರೆ ಎಂದು ನಾನು ದಾಖಲೆಯನ್ನು ನೋಡಿ ಹೇಳಬೇಕಾಗುತ್ತದೆ. ನನ್ನ ತಾಯಿ ಸ್ವ ಇಚ್ಛೆಯಿಂದ ನನಗೆ ಸೆಟಲ್ಮೆಂಟ್ ಡೀಡ್ ಮಾಡಿಕೊಟ್ಟಿದ್ದಾರೆ ಎಂದು ತೋರಿಸಲು ಇತರೇ ದಾಖಲೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆಕೆಯ ಸ್ವಇಚ್ಛೆಯಿಂದ ಬರೆದುಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ . ಸೆಟಲ್ಮೆಂಟ್ ಡೀಡ್ ನ ಆದಾರದಲ್ಲಿ ನಿಮ್ಮ ತಾಯಿ ಬೇರೆ ಯಾರಿಗಾದರೂ ದಾಖಲೆ ಬರೆದುಕೊಟ್ಟಿದ್ದಾರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನಗೆ ಬರೆದುಕೊಟ್ಟಿದಾರೆ ಉಳಿದ ಆಸ್ತಿ ಹಾಗೇಯೇ ಇದೆ ಎಂದು ತಿಳಿಸಿರುತ್ತಾರೆ. ನನ್ನ ತಾಯಿ ಬೇರೆ ಯಾರಿಗೂ ಯಾವುದೇ ದಾಖಲೆ ಬರೆದುಕೊಟ್ಟಿಲ್ಲ .ಸಾಕ್ಷಿ ಮುಂದುವರಿದು ನನ್ನ ತಾಯಿ ಸ್ವಲ್ಪ ಜಾಗವನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂದು ತಿಳಿಸಿರುತ್ತಾರೆ . ನನ್ನ ತಾಯಿ ಉದಯ ಪೂಜಾರಿ ರವರಿಗೆ ಜಾಗ ಬರೆದುಕೊಟ್ಟಿರುತ್ತಾರೆ, ಆದರೇ ಎಷ್ಟು ಜಾಗ ಬರೆದುಕೊಟ್ಟಿರುತಾರೆ ಎಂದು ನನಗೆ ಈಗ ನೆನಪಿಲ್ಲ. ನನ್ನ ತಾಯಿ ಯಾವುದೇ ದಾಖಲೆಯನ್ನು ಉದಯ ಪೂಜಾರಿಗೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ಆ ರೀತಿ ಬರೆದುಕೊಡುವ ಅಧಿಕಾರ ಅಥವಾ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

ಸೆಟಲ್ಮೆಂಟ್ ಡೀಡ್ ನ ಆದಾರದಲ್ಲಿ ನಾನು ಸ್ವಲ್ಪ ಜಾಗ ಅಂದರೆ 28.75 ಸೆಂಟ್ಸ್ ಮಾರಾಟ ಮಾಡಿದ್ದೇನೆ, ಸ್ವಲ್ಪ ಜಾಗ ರಸ್ತೆಗೆ ಹೋಗಿರುತ್ತದೆ . ನಾನು ಯಾರಿಗೆ ಮಾರಾಟ ಮಾಡಿದ್ದೇನೆ ಎಂದು ಅವರ ಹೆಸರು ಈಗ ನೆನಪಿಲ್ಲ.ನನಗಾಗಲೀ , ನನ್ನ ತಾಯಿಗಾಗಲೀ ದಾವಾ ಸ್ವತ್ತನ್ನು ಕ್ರಯಕ್ಕೆ ಕೊಡುವ ಅಥವಾ ಸೆಟಲ್ಮೆಂಟ್ ಡೀಡ್ ಬರೆದುಕೊಡುವ ಅಥವಾ ಯಾವುದೇ ದಾಖಲೆ ಮಾಡುವ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಮಗೆ ಯಾವುದೇ ಹಕ್ಕು ಇಲ್ಲದಿದ್ದರೂ ಕೂಡ ನಾವು ಮಾರಾಟ ಮಾಡಿರುವುದರಿಂದ ಸದ್ರಿ ಎಲ್ಲಾ ಕ್ರಯಪತ್ರಗಳು ವಾದಿ ಹಕ್ಕಿಗೆ ಬದ್ದಪಡುವುದಿಲ್ಲ ಎಂದರೆ ಸರಿಯಲ್ಲ. ನಿಪಿ-11 ವಿಭಾಗಪತ್ರ ಮಾಡಿಕೊಳ್ಳಲು

ಕೂಡ ಅದರಲ್ಲಿ ಕಾಣಿಸಿರುವ ಪಕ್ಷಗಾರರಿಗೆ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-16 ರಂತೆ ವಾದಿ ದಾವೆ ಹಾಕುವ ಮೊದಲು ನನಗೆ ನೋಟಿಸು ಕೊಟ್ಟಿದ್ದರು ಎಂದರೆ ಸರಿ . ಸದರಿ ನೋಟಿಸಿಗೆ ನೀವು ಯಾವುದೇ ಉತ್ತರ ನೀಡಿಲ್ಲ ಎಂದರೆ ಸಾಕ್ಷಿ ಶಂಕರ ಪೂಜಾರಿ ನಮ್ಮ ಮನೆಗೆ ಬರುತಿದ್ದ ಆಗ ನಾನು ವಿಚಾರಿಸಿದಾಗ ನನ್ನನ್ನು ಹೆದರಿಸಲು ನೋಟಿಸು ಕೊಟ್ಟಿರುವುದಾಗಿ ಮತ್ತು ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ ಆದ್ದರಿಂದ ನೀನು ಉತ್ತರ ಕೊಡುವುದು ಬೇಡ ಎಂದು ಆತ ತಿಳಿಸಿದ್ದ ಎಂದು ತಿಳಿಸಿರುತ್ತಾರೆ. ಈ ವಿಚಾರವನ್ನು ನನ್ನ ಲಿಖಿತ ಪ್ರತಿವಾದ ಪತ್ರದಲ್ಲಿ ನಾನು ಹೇಳಲಿಲ್ಲ . 06-05-2003 ರಂದು ನೋಟರಿರವರ ಸಮಕ್ಷಮ ಒಂದು ಪ್ರಮಾಣ ಪತ್ರ ಬರೆದುಕೊಟ್ಟಿದ್ದಾರೆ ಎಂದು ತಿಳಿಸಿದ್ದು ಅದರ ಬಗ್ಗೆ ನನಗೆ ಗೊತ್ತಿಲ್ಲ. ಆ ರೀತಿಯ ಪ್ರಮಾಣ ಪತ್ರ ನನ್ನ ಬಳಿ ಇಲ್ಲ. ನಾನು ಈಗ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಪುತ್ತೂರು ಗ್ರಾಮದ ಶಂಕರ್ ಶೆಟ್ಟಿ ರವರ ಪರಿಚಯ ಇದೆ. ಅದೇ ರೀತಿ ಮುದ್ದು ಶೆಟ್ಟಿ ರವರ ಮಗ ಚಂದ್ರಶೇಖರ ರವರ ಪರಿಚಯ ಕೂಡ ಇದೆ. ಅಕ್ಟೋಬರ್ 2016 ರಲ್ಲಿ ವಾದಿ ಶಂಕರ್ ಪೂಜಾರಿ ಊರಿಗೆ ಬಂದಿದ್ದರು ಎಂದರೆ ನನಗೆ ನೆನಪಿಲ್ಲ. ಆ ಸಮಯದಲ್ಲಿ ನಾನು ಅಕ್ಟೋಬರ್ 2016 ರಲ್ಲಿ ಶಂಕರ ಪೂಜಾರಿ ನಮ್ಮ ಊರಿಗೆ ಬಂದಿದ್ದಾಗ ಶಂಕರ್ ಶೆಟ್ಟಿ ಮತ್ತು ಚಂದ್ರ ಶೇಖರ ರವರ ಮೂಲಕ ಒಪ್ಪಿಗೆ ಪತ್ರಕ್ಕೆ ಸಹಿ ಮಾಡಿಕೊಡಬೇಕು ಎಂದು ಶಂಕರ್ ಪೂಜಾರಿರವರಿಗೆ ದಾಖಲೆಯನ್ನು ಕಳುಹಿಸಿಕೊಟ್ಟಿದ್ದೆ ಎಂದರೆ ಸರಿಯಲ್ಲ .

ರೂ 90,00,000 ಗಳನ್ನು ನಾನು ಕೊಡುತ್ತೇನೆ ಎಲ್ಲಾ ಆಸ್ತಿಗಳನ್ನು ಬಿಟ್ಟು ಕೊಡು ಎಂದು ನಾನು ಶಂಕರ್ ಪೂಜಾರಿರವರಿಗೆ ಹೇಳಿದ್ದೆ ಎಂದರೆ ಸರಿಯಲ್ಲ. ನಾನು ಹೇಳಿದ ಹಾಗೇ ರೂ 90,00,000 ಗಳನ್ನು ಕೊಟ್ಟರೇ ಒಪ್ಪಿಗೆ ಪತ್ರಕ್ಕೆ ಸಹಿ ಮಾಡಿಕೊಡುತ್ತೇನೆ ಎಂದು ಶಂಕರ್ ಪೂಜಾರಿ ಹೇಳಿದ್ದರು ಎಂದರೆ ಸರಿಯಲ್ಲ. ಶಂಕರ್ ಶೆಟ್ಟಿ ರವರು ಈ ಬಗ್ಗೆ ನ್ಯಾಯಾಲಯದಲ್ಲಿ ಸಾಕ್ಷಿ ಕೊಟ್ಟ ಬಗ್ಗೆ ಗೊತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕೊಟ್ಟಿರಬಹುದು ಎಂದು ತಿಳಿಸಿರುತ್ತಾರೆ. ಆಸ್ತಿ ಮಾರಾಟ ಮಾಡಿದಾಗ ಬಂದ ಹಣವನ್ನು ನಾನೇ ಸಂಪೂರ್ಣವಾಗಿ ಬಳಸಿಕೊಂಡಿದ್ದೇನೆ ಎಂದರೆ ಸಾಕ್ಷಿ ಸಾಲ ಇತ್ತು ಆದ್ದರಿಂದ ಮಾರಾಟ ಮಾಡಿರುತ್ತೇನೆ ಎಂದು ತಿಳಿಸಿರುತ್ತಾರೆ . ಮದುವೆಗಾಗಿ ಕೈ ಸಾಲ ಮಾಡಿದ್ದೇವು . ಶಂಕರ್ ಪೂಜಾರಿರವರಿಗೆ ದಾವಾ ಸ್ವತ್ತುವಿನ ಉತ್ಪನದಲ್ಲಿ ನಾವು ಏನೂ ಕೊಟ್ಟಿಲ್ಲ . ಸಾಕ್ಷಿ ಮುಂದುವರಿದು ತೆಂಗಿನ ಕಾಯಿ ಮಾತ್ರ ಬರುತಿತ್ತು ಅದು ಮನೆ ಖರ್ಚಿಗೆ ಆಗುತಿತ್ತು ಕೃಷಿಯಲ್ಲಿ ಬಂದ ಹಣ ಕೃಷಿಗೆ ಖರ್ಚಾಗುತಿತ್ತು. ಸಾಕ್ಷಿ ಮುಂದುವರಿದು ನನ್ನ ಅಣ್ಣ ಬಂದರೇ ಅವರ ಹೆಂಡತಿ ಮತ್ತು ಮಕ್ಕಳು ಬರುತಿದ್ದರು ಊಟ ಮಾಡುತಿದ್ದರು ಆದ್ದರಿಂದ ಬಂದ ಉತ್ಪತ್ತಿ ಎಲ್ಲಾ ಖರ್ಚಾಗುತಿತ್ತು ಎಂದು ತಿಳಿಸಿರುತ್ತಾರೆ . ದಾವಾ ಸ್ವತ್ತುವಿನಲ್ಲಿ ಕುಟುಂಬದ ದೈವ ಇಲ್ಲ. ಆದರೇ ಜಾಗದಲ್ಲಿ ದೈವ ಇರುತ್ತದೆ ಆದರೇ ಅದು ಕುಟುಂಬದ ದೈವ ಅಲ್ಲ. ಜಾಗದಲ್ಲಿ ಇರುವ ದೈವಕ್ಕೆ ಶೇಶಿ ಪೂಜಾರ್ತಿಯ ಮಕ್ಕಳು, ತುಂಗು ಪೂಜಾರ್ತಿಯ ಮಕ್ಕಳು, ಲಕ್ಷ್ಮೀ ಪುಜಾರ್ತಿಯ ಮಕ್ಕಳು ಪೂಜೆಗೆ ಬರುತ್ತಾರೆ ಆದರೇ ನಾನೇ ಪೂಜೆ ಮಾಡಿಸುತ್ತೇನೆ. ದಾವಾ ಸ್ವತ್ತುಗಳಲ್ಲಿ ವಾದಿಗೆ 1/35 ಅಂಶದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುವಿನಲ್ಲಿ ನನ್ನ ತಾಯಿಯ ಮಕ್ಕಳಲಲ್ಲಿ ನನಗೆ ಮತ್ತು ತಂಗಿಗೆ ಹಕ್ಕು ಇರುತ್ತದೆ ನನ್ನ ಅಣ್ಣನಿಗೆ ಹಕ್ಕು ಇರುವುದಿಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಗೆ ಹಕ್ಕು ಇದೆ ಎಂದರೆ ಸರಿಯಲ್ಲ . ವಾದಿ ದಾವೆಯಲ್ಲಿ ಕೇಳಿರುವಂತಹ ಪರಿಹಾರ ಪಡೆಯಲು ಬಾದ್ಯಸ್ಥ ಎಂದರೆ ಸರಿಯಲ್ಲ. ವಾದಿಗೆ ಹಿಸ್ಸೆ ತಪ್ಪಿಸುವ ದುರುದ್ದೇಶದಿಂದ ನಾನು ಸುಳ್ಳು ಸಾಧನೆ ಮಾಡುತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ

ದುರುದ್ದೇಶದಿಂದ ವಾದಿಯನ್ನು ಹೊರಗೆ ಇಟ್ಟು ನಾನು ಆಸ್ತಿಗಳನ್ನು ನನ್ನ ಹೆಸರಿಗೆ ಮಾಡಿಕೊಂಡು ಅದನ್ನು ಮಾರಾಟ ಮಾಡಿ ಬಂದ ಹಣವನ್ನು ನಾನೇ ದುರುದ್ದೇಶದಿಂದ ಇಟ್ಟುಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.